ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 6, May-June, 2023, Pp. 83-88.**
**©*IIMRD*, Mysuru**

IIMRD JOURNALS

**www.iimrd.com**

# ಜನಪದ ಗಾದೆಗಳಲ್ಲಿ ಮಹಿಳೆ: ನೇತ್ಯಾತ್ಮಕ ದೃಷ್ಟಿ

*** ಡಾ. ರಾಜೇಶ. ಎಂ.**

*ಜಾನಪದ ಸಂಶೋಧಕ, ಬಿಳುಗಲಿ ಗ್ರಾಮ ಮತ್ತು ಅಂಚೆ, ಬಿಳಿಗೆರೆ ಹೋಬಳಿ,
ನಂಜನಗೂಡು ತಾಲೂಕು, ಮೈಸೂರು.

***ಸಾರಾಂಶ:(Abstract)***

*ಜನಪದ ಸಾಹಿತ್ಯವು ಮಾನವನ ಸಂಸ್ಕೃತಿಯಷ್ಟು ಪ್ರಾಚೀನವಾದುದು. ಜನಪದ ಸಾಹಿತ್ಯ ಬಾಯಿಂದ ಬಾಯಿಗೆ ಹರಿದು ಬರುತ್ತಾ ಇಂದಿನವರೆಗೂ ಉಳಿದುಕೊಂಡು ಬಂದಿದೆ ಇದನ್ನು ಮೌಖಿಕ ಪರಂಪರೆ ಎನ್ನುವರು. ಜನಪದ ಸಾಹಿತ್ಯ ಜನಪದರ ಬದುಕಿನಿಂದಲೇ ಮೂಡಿಬಂದಿದೆ. ಇವರಿಗೆ ಬುದ್ಧಿವಂತಿಕೆ, ವಿದ್ಯಾವಂತಿಕೆ, ವ್ಯವಸ್ಥಿತ ಶಿಕ್ಷಣದಿಂದಾಗಲೀ, ಅಕ್ಷರ ಜ್ಞಾನದಿಂದಾಗಲೀ ಬಂದುದಾಗಿರದೇ ಅನುಭವಿಗಳ ಮೌಖಿಕ ವಿನಿಮಯದ ಮೂಲಕ ಬಂದೊದಗಿರುತ್ತದೆ. ಇದಕ್ಕನುಗುಣವಾಗಿ ರೀತಿ–ನೀತಿಗಳನ್ನು, ಆಚಾರ–ವಿಚಾರಗಳನ್ನು, ನಡವಳಿಕೆಗಳನ್ನು ರೂಪಿಸಿಕೊಂಡಿರುತ್ತಾರೆ. ಜನಪದರು ತಮ್ಮ ಅನುಭವಗಳನ್ನು ತಮ್ಮ ನಾಲಗೆಯ ಮೇಲೆ ಬಿತ್ತಿ ಬೆಳೆದಿರುವವರು. ಮನದ ಭಾವನಾ ತರಂಗಗಳಲ್ಲಿ ಅವರ ನೋವು–ನಲಿವು, ಸುಖ–ದುಃಖಗಳು ಸ್ಪುರಿತಗೊಂಡಿರುವುದನ್ನು ಕಾಣಬಹುದಾಗಿದೆ.*

***ಮುಖ್ಯಪದಗಳು (Keywords)*** *ಜನಪದ ಸಾಹಿತ್ಯ, ಗಾದೆ, ಮಹಿಳೆ, ನೇತ್ಯಾತ್ಮಕ ದೃಷ್ಟಿಕೋನ.*

**ಪೀಠಿಕೆ**

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಗಾದೆಯೂ ಕೂಡ ಒಂದು. ಇದು ಜನಪದರ ಬದುಕಿನ ಅಭಿವ್ಯಕ್ತಿ ಮಾಧ್ಯಮ. ಸಾಹಿತ್ಯದಲ್ಲಿ ಗಾದೆಗಳು ಅತ್ಯಂತ ಮಹತ್ವಪೂರ್ಣವಾದ ಸ್ಥಾನವನ್ನು ಅಲಂಕರಿಸಿವೆ. ಅನುಭವದ ಸಾಂದ್ರತೆ, ವಸ್ತು ವೈವಿಧ್ಯತೆ, ಸಂಸ್ಕೃತಿ ಸಂಪನ್ನತೆ, ವಿಚಾರ ವೈಭವಕ್ಕೆ ಹೆಸರಾಗಿರುವ ಇದು ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಗಾದೆಗಳು ಜ್ಞಾನದ ಆಗರವೂ, ಅನುಭವದ ಸಾಗರವೂ ಆಗಿವೆ. ಕಾಲದಿಂದ ಕಾಲಕ್ಕೆ ಸಂಸ್ಕೃತಿಯನ್ನು ನಿಶ್ಚಿತ ರೀತಿಯಲ್ಲಿ ಪ್ರವಹಿಸುವ ಸಾಧನಗಳಾಗಿವೆ. ಆಂಗ್ಲಭಾಷೆಯ 'Proverb' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಕಂಡುಬರುವ ಶಬ್ಧಗಳೆಂದರೆ ನಾಣ್ಣುಡಿ ಮತ್ತು ಗಾದೆ. ಆಂಗ್ಲಭಾಷೆಯ Proverb ಪದಕ್ಕೆ ಮೂಲ ಲ್ಯಾಟಿನ್‌ನ 'Proverbium' ಎಂಬುದಾಗಿದೆ. A word uttered in public ಎಂದು ಇದಕ್ಕೆ ಸಂವಾದಿಯಾಗಿ ಸಂಸ್ಕೃತದಲ್ಲಿ ಪ್ರವಾದ, ಲೋಕಪ್ರವಾದ, ಲೋಕೋಕ್ತಿ, ಹಿಂದಿಯಲ್ಲಿ ಕಹವಾತ್, ಬಂಗಾಳಿಯಲ್ಲಿ ಪ್ರವಾದ, ಮಲಯಾಳಂನಲ್ಲಿ ಪಳಂಚೋಲ್,

*Please cite this article as:* ಡಾ. ರಾಜೇಶ. ಎಂ. (2023). ಜನಪದ ಗಾದೆಗಳಲ್ಲಿ ಮಹಿಳೆ: ನೇತ್ಯಾತ್ಮಕ ದೃಷ್ಟಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 83–88.*

ತಮಿಳಿನಲ್ಲಿ ಪಳಮೊಳಿ, ತೆಲುಗಿನಲ್ಲಿ ಸಾಂತಿ ಎನ್ನುವರು. ಕನ್ನಡದಲ್ಲಿ ಗಾದೆ, ನಾಣ್ಣುಡಿ ಶಬ್ಧಗಳು ಚಾಲ್ತಿಯಲ್ಲಿವೆ. ಇದು ಸಂಸ್ಕೃತದ ಗಾಥಾ ಎಂಬ ಶಬ್ಧದ ತದ್ಭವ ರೂಪವಾಗಿದೆ.

ಜನಪದ ಸಂಸ್ಕೃತಿಯಲ್ಲಿ ಸ್ತ್ರೀ ತನ್ನ ಅಭಿಪ್ರಾಯಗಳನ್ನು ಅಭಿವ್ಯಕ್ತಿಗೊಳಿಸಲು ಹೆಚ್ಚು ಸ್ವತಂತ್ರ ಮತ್ತು ಸಮರ್ಥಳಾಗಿದ್ದಾಳೆ ಎಂಬ ಅಭಿಪ್ರಾಯವಿದೆ. ಆದ್ದರಿಂದ ಸಾಹಿತ್ಯ ಮತ್ತು ಸಮಾಜ–ಸಂಸ್ಕೃತಿ ಜನಪದ ಒಂದಕ್ಕೊಂದು ತೀವ್ರವಾದ ಅಂತಃ ಸಂಬಂಧವನ್ನು ಹೊಂದಿರುತ್ತವೆ. ಪಿತೃಪ್ರಧಾನ ವ್ಯವಸ್ಥೆಯಡಿಯಲ್ಲಿ ರಚನೆಯಾದ ಈ ಜನಪದ ಸಾಹಿತ್ಯದಲ್ಲಿ ಸ್ತ್ರೀ ಬಗೆಗಿನ ದೃಷ್ಟಿಕೋನಗಳನ್ನು ಅವಲೋಕಿಸುವುದು ಬಹುಮುಖ್ಯವಾಗಿರುತ್ತದೆ. ಪ್ರಾಚೀನ ಕಾಲದಿಂದಲೂ ಸ್ತ್ರೀಯು ತನ್ನ ತನವನ್ನು ಮುಚ್ಚಿಡುತ್ತಾ ಬಂದಿದ್ದಾಳೆ. ಈ ಗೌಪ್ಯತೆಯಲ್ಲಿ ವೈಯಕ್ತಿಕತೆಯನ್ನು ಹುಡುಕಲು ಅವಳು ಪ್ರಯತ್ನಿಸುವುದಿಲ್ಲವೆಂದೇ ಹೇಳಬಹುದು. ಸ್ತ್ರೀಯನ್ನು ಕುರಿತು ಪುರುಷರ ದೃಷ್ಟಿ ಎಂದಿಗೂ ಕೂಡಾ ವಿಶಾಲವಾಗಿರಲಾರದು. ಜೈವಿಕವಾಗಿ ಸೂಕ್ಷ್ಮಳಾದರೂ ಮಾನಸಿಕವಾಗಿ ಸದೃಢತೆಯನ್ನು ಹೊಂದಿರುವ ಸ್ತ್ರೀಯನ್ನು ನಿಯಂತ್ರಿಸಲು ಪುರುಷ ಹುಡುಕಿಕೊಂಡ ಮೊದಲ ಅಸ್ತ್ರವೇ ಲೈಂಗಿಕತೆಯಾಗಿದೆ. ಬೀಜೋತ್ಪಾದನೆಯ ಮೂಲಕ ಪ್ರಭುತ್ವ ಸಾಧಿಸಲು ಅವನು ಪ್ರಯತ್ನಿಸುವುದರ ಜೊತೆಗೆ ಗೆಲುವನ್ನು ಸಾಧಿಸಿದನು. ತನ್ನ ಪ್ರಭುತ್ವದ ಅಡಿಯಲ್ಲಿ ಸ್ತ್ರೀಯನ್ನು ಸಿಲುಕಿಸಲು. ಅವಳ ಮೇಲೆ ಹಲವಾರು ವಿಧವಾದ ಕಟ್ಟುಪಾಡುಗಳನ್ನು ವಿಧಿಸಿದನು. ಅವಳು ಹೀಗೆಯೇ ಇರಬೇಕು ಎನ್ನುವಂತಹ ರೀತಿ–ನೀತಿಗಳನ್ನು ಸೃಷ್ಟಿಸಿದನು. ಇಂತಹ ರೀತಿ–ನೀತಿಗಳ ಮೇಲೆ ಹಲವಾರು ಗಾದೆಗಳು ಸೃಷ್ಟಿಗೊಂಡವು.

***'ತಾಯಿಯಂತೆ ಮಗಳು ನೂಲಿನಂತೆ ಸೀರೆ***

***ಹೆಣ್ಣಿನ ಗುಣವನ್ನು ಹೀಚಿನಲ್ಲಿ ನೋಡು***

***ತಾಯಿ ನೋಡಿ ಹೆಣ್ಣು ತಂದುಕೋ, ಹಾಲು ನೋಡಿ ಎಮ್ಮೆ ಕೊಂಡುಕೋ***

***ಕಾಲ ನೋಡಿ ಹೆಣ್ಣು ಕೊಡು, ಮರ ನೋಡಿ ಬಳ್ಳಿ ನೆಡು***

***ಜಲ ನೋಡಿ ನೀರು ತಾ, ಗುಣ ನೋಡಿ ಹೆಣ್ಣು ತಾ'***

ಮದುವೆಯು ಸಮಾಜದ ಬೆಳವಣಿಗೆಗೆ ಒಂದು ಅಡಿಗಲ್ಲು. ವಯಸ್ಸಿಗೆ ಬಂದ ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಆಲೋಚನೆಗಳನ್ನು ತಂದೆ–ತಾಯಿ ನಡೆಸುತ್ತಲೇ ಬಂದಿದ್ದಾರೆ. ಪುರುಷ ನಿಷ್ಠ ಸಮಾಜ ವ್ಯವಸ್ಥೆಯಲ್ಲಿ ಲಿಂಗ ಪಾವಿತ್ರ್ಯತೆಯು ಹೆಣ್ಣಿನ ನಡತೆಯನ್ನು ತಿದ್ದುತ್ತಲೇ ಬಂದಿದೆ.

ಹೆಣ್ಣಿನ ನಡತೆಯನ್ನು ಹೆಣ್ಣಿನಿಂದಲೇ ತಿದ್ದಲಾಗುತ್ತದೆ. ಹೆಣ್ಣನ್ನು ಬೆಳೆಸುವಲ್ಲಿ ತಾಯಿಯ ಪಾತ್ರ ಬಹುಮುಖ್ಯವಾದುದು. ಆದ್ದರಿಂದ ತಾಯಿಯೇ ಮಗಳ ನಡತೆಯ ಸೂತ್ರಧಾರಿ ಎಂಬ ನಂಬಿಕೆ ಆಳವಾಗಿ ಬೇರೂರಿದೆ. ಇಲ್ಲಿ ತಂದೆಯ ಪಾತ್ರ ಗೌಣ. ಶುಚಿತ್ವದ ಕಲ್ಪನೆಯ ಅಡಿಯಲ್ಲಿ ದೈಹಿಕ ಪಾವಿತ್ರ್ಯತೆಯು ಇಲ್ಲಿ ಗೌಣವಾಗಿದೆ. ವಿವಾಹವಾಗುವ ವಧುವಿನ ಗುಣ–ನಡತೆಗಳನ್ನು ಅಳೆದು ತಂದರೂ, ನಂತರದಲ್ಲಿ ಒಂದು ಸಣ್ಣ ಅನಾಹುತ ಸಂಭವಿಸಿದರೂ ಅವಳನ್ನು ತಿರಸ್ಕರಿಸುವ ವೈಭವಯುಕ್ತ ಸಂಸ್ಕೃತಿಯಲ್ಲಿ ವರನ ಗುಣಗಳಲ್ಲಿ ರಿಯಾಯಿತಿ ಕಾಣಬಹುದಾಗಿದೆ. ಬಹುಪತ್ನಿತ್ವ ಹಾದರದ ಪರಿಕಲ್ಪನೆ ಅಡಿಯಲ್ಲಿ ಬಂದರೆ ಬಹುಪತ್ನಿತ್ವ ಪ್ರತಿಷ್ಠೆಯ ಪರಿಕಲ್ಪನೆಯ ಅಡಿಯಲ್ಲಿ ಬರುತ್ತದೆ.

ಸನಾತನ ಸಂಸ್ಕೃತಿಯ ಆಳದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುವ ಅನಾಚಾರಗಳು ಕಡಿಮೆಯೇನಿಲ್ಲ. ರಾಜ–ಮಹಾರಾಜರು ಹಲವಾರು ಪತ್ನಿಯರನ್ನು ಸಲಹುತ್ತಿದ್ದರೂ ಅದು ಅವರ ಗೌರವದ ಸಂಕೇತ. ಧರ್ಮದ ಹೆಸರಿನಲ್ಲಿ ದೇವದಾಸಿಯರನ್ನು ಬಿಡುವುದು ಧಾರ್ಮಿಕತೆಯ ಸಂಕೇತ. ಅದೇ ಸಾಮಾನ್ಯ ಜನತೆಯಲ್ಲಿ ಅನಿವಾರ್ಯವಾಗಿ ಈ ತರಹದ ಸ್ಥಿತಿಗಿಳಿಯುವ ಹೆಣ್ಣು ಮಕ್ಕಳನ್ನು ಗುರುತಿಸುವುದು 'ಸೂಳೆ' ಎಂದು ಮೈಲಿಗೆಯನ್ನು ತಮ್ಮ ದಿನಿನಿತ್ಯದ ಜೀವನ ಕ್ರಮವನ್ನಾಗಿ ಮಾಡಿಕೊಂಡ ಇವಳು ಸಮಾಜದ ತಿರಸ್ಕಾರಕ್ಕೆ ಒಳಗಾಗಿದ್ದರೂ ಅವಳೂ ಸ್ತ್ರೀ. ಒಂದು ಹೆಣ್ಣು ಸೂಳೆಯಾಗಿ ಮಾರ್ಪಾಡಾಗಬೇಕಾದರೆ ಅವರ ಹಿಂದೆ ಕೆಲಸ ಮಾಡುವಂತಹ ಪರಂಪರೆಯನ್ನು ನೆನೆಯಬೇಕು. ದೈಹಿಕ ಶುಚಿತ್ವಕ್ಕೆ ಮಹತ್ವವನ್ನು ಕೊಡುವ ಸಂಸ್ಕೃತಿಯಲ್ಲಿ ಹೆಣ್ಣು ಕೂಡ ಈ ನಿಯಮಗಳಡಿಯಲ್ಲಿಯೇ ನಡೆಸುತ್ತಾಳೆ. ಜೀವನದಲ್ಲಿ ಬರುವ ಎಲ್ಲಾ ಕಷ್ಟಗಳನ್ನು ಆದಷ್ಟು ತನ್ನ ಶಕ್ತಿ ಸಾಮರ್ಥ್ಯ ಮೀರಿ ಪೂರೈಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ತನ್ನ ಧೈರ್ಯಗಳನ್ನೆಲ್ಲಾ ಖರ್ಚುಮಾಡಿ ಅಸಹಾಯಕಳಾಗಿ ನಿಲ್ಲುವ ಕೊನೆಯ ಹಂತವೇ ಸೂಳೆ. ಇಂತಹವುಗಳ ಬಗೆಗೆ ದೊರೆಯುವ ನೂರಾರು ಗಾದೆಗಳಿವೆ. ಒಂದು ಅಂಶವನ್ನು ನಾವು ಗಮನಿಸಬೇಕು. ಯಾವ ಸಾಂಪ್ರದಾಯಿಕ ಮನಸ್ಸು ಹೀನಾಯತೆಯಿಂದ ಈ ಸಂಸ್ಕೃತಿಯನ್ನು ಕಾಣುತ್ತದೆಯೋ, ಅದೇ ಮನಸ್ಸು ಆ ವಿಷಯದ ಬಗೆಗೆ ನೂರಾರು ಗಾದೆಗಳನ್ನು ರಚಿಸಿತು. ಬೇರೆ ಇತರ ವಿಷಯಗಳಿಗೆ ಹೋಲಿಸಿದರೆ ಸೂಳೆಗೆ ಸಂಬಂಧಿಸಿದಂತೆ ದೊರಕುವ ಗಾದೆಗಳು, ಇತರೆ ಗಾದೆಗಳ ಪ್ರಮಾಣಕ್ಕೆ ಹೋಲಿಸಿದಾಗ ಹೆಚ್ಚೆಂದೇ ಹೇಳಬೇಕು.

*'ಸೂಳೆಗೂ ಸುಣ್ಣಕ್ಕೂ ಎಗ್ಗಿಲ್ಲ*

*ಸೂಳೆಗೆ ಇಕ್ಕಿದ ಹಣ, ಸುಡುಗಾಡಿಗೆ ಹೋದ ಹೆಣ*

*ಸೂಳೆಗೆ ಕುಲವಿಲ್ಲ, ನಾಯಿಗೆ ನೆಲೆಯಿಲ್ಲ*

*ರಂಡೆಗೆ ಗಂಡನಿಲ್ಲ, ಮುಂಡೆಗೆ ಭಯವಿಲ್ಲ*

*ಮುಪ್ಪಿನ ಸೂಳೆ ಮಹಾಪತಿವ್ರತೆ*

*ಸೂಳೆಯ ಕೈಯಿಂದ ಜೋಳ ಕುಟ್ಟಿಸಿದ ಹಾಗೆ*

*ಹಾದರಗಿತ್ತಿ ನೋಡಿಕೊಂಡು ಗರತಿ ಗಂಡನ ಬಿಟ್ಟಳು*

*ಗರತಿಗೆ ಹಾದರ ಸಲ್ಲ, ಸೂಳೆಗೆ ವ್ರತ ಸಲ್ಲ*

*ಅರಸು ಯಾರಿಗೆ ಅಪ್ಪ? ಸೂಳೆ ಯಾರಿಗೆ ಅವ್ವ'*

ಮುಂತಾದವು ಸೂಳೆ ಕುರಿತಂತವುಗಳಾಗಿವೆ. ಇದು ಈ ಸಮಾಜ ವಿಧಿಸಿರುವ ಕಟ್ಟುಪಾಡುಗಳು. ಯಾವುದೇ ಹೆಣ್ಣು ಹಣದ ಆಸೆಯಿಂದ ಈ ವೃತ್ತಿಗಿಳಿಯುವುದಿಲ್ಲ. ಅವಳ ಅಸಹಾಯಕ ಪರಿಸ್ಥಿತಿ ಅವಳನ್ನು ಈ ಸ್ಥಿತಿಗೆ ಇಳಿಸಿ ಬಿಡುತ್ತದೆ. ಇದು ಕೇವಲ ಅವಳ ವೈಯಕ್ತಿಕ ಕರ್ಮವಲ್ಲ. ಆದರೂ ಅವಳಿಗೆ ವಿಧಿಸಿರುವ ಶಿಕ್ಷೆ ಮಾತ್ರ ಅಪಾರವಾದುದು. ಆದರೆ ಅವಳ ಹಿಂದೆ ಕೆಲಸ ಮಾಡಿದ ಶಕ್ತಿಗಳನ್ನು ಯಾರೂ ಕೂಡ ಪ್ರಶ್ನಿಸಲು ಹೋಗುವುದಿಲ್ಲ. ಪ್ರಶ್ನಿಸಲೂಬಾರದು. ಆದರೆ ಈ ಹೆಣ್ಣು ಈಗಿರುವ ಸ್ಥಿತಿಗಳಲ್ಲಿಯೇ ಇರಬೇಕು. 'ಗಂಡಿನ ಅಧಿಕಾರ ಪ್ರವೃತ್ತಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ನಿರಂತರವಾಗಿ ಹೋರಾಡುತ್ತಲೇ

ಬಂದಿದೆ. ಅದಕ್ಕಾಗಿ ಮೌಲ್ಯದ ಹೆಸರಿನಲ್ಲಿ ಹೆಣ್ಣಿಗೆ ಕೆಲವೊಂದು ಗುಣ, ಪಾತ್ರಗಳನ್ನು ನಿರ್ದೇಶಿಸಿ ಅದನ್ನು ಸಹಜ ಎಂದು ಭ್ರಮಾತ್ಮೀಕರಣಗೊಳಿಸಲಾಗಿದೆ. ಗಾದೆಗಳು ಇಂತಹ ಸಾಮಾಜಿಕ ನೀತಿ ನಿಯಮಗಳನ್ನು ಜಾರಿಗೊಳಿಸುವಲ್ಲಿ ಮತ್ತು ಪುರುಷಾಧಿಕಾರದ ಸ್ವಾತಂತ್ರ್ಯಕ್ಕಾಗಿ ದುಡಿಯುತ್ತಿರುತ್ತದೆ. ಹೀಗಾಗಿ ಇವು ಪ್ರಕಟಿಸುವ ನಿಲುವು ಇಂತಹ ಮೌಲ್ಯಗಳನ್ನು ಸ್ವೀಕರಿಸುವುದೇ ಆಗಿದೆ.'

***'ಅಂಕೆಯಲ್ಲಿದ್ದ ಹೆಣ್ಣು, ಮಜ್ಜಿಗೆಯಲ್ಲಿದ್ದ ಬೆಣ್ಣೆ ಕೆಡದು***

***ಊಟ ಕೆಟ್ಟರೆ ದಿವಸ ಕೆಟ್ಟಿತು, ಹೆಂಡತಿ ಕೆಟ್ಟರೆ ಜೀವನ ಕೆಟ್ಟಿತು***

***ಉಕ್ಕಿ ಹರಿಯುವ ನದಿ, ಸೊಕ್ಕಿ ಕುಣಿಯುವ ಹೆಣ್ಣನ್ನು ಹಿಡಿದು ನಿಲ್ಲಿಸುವವರಾರು***

***ಅನ್ನದ ಸಂಗಡ ಹೋದ ನೀರು, ಗಂಡನ ಸಂಗಡ ಹೋದ ಹೆಣ್ಣು ಕೆಡದು***

***ಗಂಡಗೆ ಅಂಜದ ನಾರಿ ಅವಳೇ ಹೆಮ್ಮಾರಿ***

***ಎತ್ತು ಸೊಕ್ಕಿದರೆ ಹಟ್ಟಿಯಲ್ಲಿ ನಿಲ್ಲದು, ಹೆಣ್ಣು ಸೊಕ್ಕಿದರೆ ಮನೆಯಲ್ಲಿ ನಿಲ್ಲದು'***

ಈ ಗಾದೆಗಳನ್ನು ಅವಲೋಕಿಸಿದಾಗ ಹೆಣ್ಣು ಹೀಗೆಯೇ ಇರಬೇಕು ಎಂಬ ಕಟ್ಟುಪಾಡುಗಳನ್ನು ಮೊದಲೇ ನಿರ್ಧರಿಸಲಾಗುತ್ತದೆ. ಹೆಣ್ಣು ಧರೆಗೆ ಕಾಲಿಟ್ಟ ದಿನದಿಂದ ಅವಳನ್ನು ಹೆಣ್ಣಾಗಿಸುವ ಎಲ್ಲಾ ಕಾರ್ಯಗಳು ಸಮಾಜದಲ್ಲಿ ನಡೆಯುವುದಕ್ಕೆ ಆರಂಭವಾಗುತ್ತವೆ. ಶೀಲವನ್ನು ಪಾವಿತ್ರ್ಯತೆಯ ಸಂಕೇತವಾಗಿ ವೈಭವೀಕರಿಸಲಾಗುತ್ತದೆ. ಆದ್ದರಿಂದಲೇ ಹೆಣ್ಣು ಮಕ್ಕಳನ್ನು ಗಂಡನ ಮನೆಗೆ ಕಳುಹಿಸುವವರಿಗೂ ಅವರಿಗೆ ಸಮಾಧಾನವಿಲ್ಲ. ಅದು ಪೋಷಕರು ತಮ್ಮ ಮಡಿಲಲ್ಲಿ ಕೆಂಡ ಕಟ್ಟಿಕೊಂಡ ಆಗಿರುತ್ತದೆ. ಅವಳು ತವರುಮನೆಯಲ್ಲಿ ಅಪ್ಪ, ಅಣ್ಣನ ಹಿಡಿತದಲ್ಲಿ ಬೆಳೆದರೆ ಗಂಡನ ಮನೆಯಲ್ಲಿ ಗಂಡ, ಮಾವನ ಹಿಡಿತದಲ್ಲಿರುತ್ತಾಳೆ. ಒಟ್ಟಾರೆ ಅವಳನ್ನು ಯಾರಾದರೂ ಬಂಧಿಸಲೇಬೇಕು. ಬಂಧಿಸದಿದ್ದರೆ ಅವಳು ಸೊಕ್ಕಿದ ಹೆಣ್ಣಾಗುತ್ತಾಳೆ. ಯಾರ ಕೈಗೂ ಸಿಕ್ಕದವಳಾಗಿರುತ್ತಾಳೆ. ಆದ್ದರಿಂದ ಅವಳನ್ನು ಅಂಕೆಯಲ್ಲಿಡಬೇಕು. ಅಷ್ಟೇ ಅಲ್ಲ ಅವಳ ಮಾತುಗಳು, ವಿಚಾರಗಳು ಕೊನೆಗೆ ಅವಳ ನಗುವಿನ ಮೇಲೂ ಹಿಡಿತ ಸಾಧಿಸತೊಡಗಿದರು.

***'ಉಕ್ಕಿದ್ಮೇಲೆ ಹಾಲಲ್ಲ, ನಕ್ಕಿದ್ಮೆಲೆ ಹೆಣ್ಣಲ್ಲ***

***ಅಳುವ ಗಂಡಸನ್ನು, ನಗುವ ಹೆಣ್ಣನ್ನು ನಂಬಬಾರದು'***

ಯಾವ ನಗುವಿನಿಂದ ಸಂತೋಷವು ತುಂಬಿ ನೋವುಗಳನ್ನು ಮರೆಯಲಾಗುತ್ತದೆಯೋ ಅಂತಹ ನಗುವೆ ಹೆಣ್ಣಿನ ಪಾಲಿಗೆ ಗಗನ ಕುಸುಮವಾಗುತ್ತದೆ. ಹೆಣ್ಣು ನಕ್ಕರೆ ಏನೋ ಕೆಟ್ಟ ಉದ್ದೇಶವಿದೆ ಎಂಬ ಅರ್ಥದಲ್ಲಿ ಹಲವಾರು ಗಾದೆಗಳು ಸಮಾಜವನ್ನು ಪ್ರತಿಬಿಂಬಿಸುತ್ತವೆ.

ಲಿಂಗಭೇದದ ಹಿನ್ನೆಲೆಯಲ್ಲಿ ಯಾವ ಸಾಹಿತ್ಯವನ್ನು ನೋಡಬಾರದು. ಒಳ್ಳೆಯದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಅಂದುಕೊಂಡರು ಹಲವು ವಿಷಯಗಳು ಹಾಗಾಗಲು ಸಾಧ್ಯವಾಗುವುದೇ ಇಲ್ಲ. ಹೆಣ್ಣು ಎಂದರೆ ಸಾಕು ಸಮಾಜವೇ ಮೂಗು ಮುರಿಯುತ್ತದೆ. ಎಲ್ಲಾ ಕೆಲಸಕ್ಕೂ ಸರಿಸಮಾನವಾಗಿ ಪಾಲ್ಗೊಳ್ಳಬೇಕಾದ ಗಂಡು–ಹೆಣ್ಣು ತೀರಾ ವಿರೋಧಿಗಳೆಂಬಂತೆ ಚಿತ್ರಿತವಾಗುತ್ತಾರೆ. ಹೆಣ್ಣು ಜನನವಾದರೆ ಅಪಶಕುನಗಳಿಗೆಲ್ಲ ನಾಂದಿ ಹಾಡಿದಂತೆ ಎಂಬ ಹಾಗೆ ಅವಳನ್ನು ನೋಡಲಾಗುತ್ತಿದೆ.

*'ಹೆಣ್ಣು ಪಂಜರಜೀವಿ, ಗಂಡು ಅಂಬರಜೀವಿ*

*ಹೆಣ್ಣು ಹಡೆದವನ ಮನೆ ನುಣ್ಣಗೆ, ಗಂಡು ಹಡೆದವನ ಮನೆ ತಣ್ಣಗೆ*

*ಹೆಣ್ಣು ಹುಟ್ಟಿದ ಮನೆ ಹೆಗ್ಗಣತ್ತಿಂದಾಗೆ*

*ಹೆಣ್ಣಿನ ತಂದೆ ಹಣ್ಣಾಗುತ್ತಾನೆ. ಗಂಡಿನ ತಂದೆ ದುಂಡಾಗುತ್ತಾನೆ.*

*ಹೆಣ್ಣು ನೆರೆಮನೆಯ ಸಿರಿದೇವಿ, ಗಂಡು ಮನೆಯ ತೊಲೆಗಂಬ'*

ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಆಸ್ತಿಯ ಮೇಲೆ ಗಂಡು ತನ್ನ ಪೂರ್ಣ ಹಕ್ಕನ್ನು ಸ್ಥಾಪಿಸಿಕೊಂಡನು. ಅಲ್ಲದೆಯೇ ತನ್ನ ಸಮನಕ್ಕೆ ಮನೆಯಲ್ಲಿ ನೋಡಿಕೊಂಡು ಹೋಗುತ್ತಿದ್ದ ಹೆಣ್ಣು ಕೇವಲ ನಾಲ್ಕು ಗೋಡೆಗಳಿಗೆ ಸೀಮಿತಳು ಎಂಬ ಮನಸ್ಥಿತಿಯಿಂದ ನೋಡಿದ. ಉತ್ಪಾದನೆಯನ್ನು ಮಾಡುತ್ತಿದ್ದರು ಕೇವಲ ಅನುತ್ಪಾದಕಳು, ಪರವಾಲಂಬಿ ಎಂದೆಲ್ಲಾ ಕರೆದು ಶೋಚನೀಯ ಸ್ಥಿತಿಯಲ್ಲಿ ತಂದಿರಿಸಿದನು. ಅವಳ ಕೆಲಸ–ಕಾರ್ಯಗಳು, ಕುಟುಂಬಕ್ಕೆ ಮಾಡಲೇಬೇಕಾದ ಅವಳ ಕರ್ತವ್ಯವೆಂದು ಒತ್ತಡ ಏರಿದನು. ಈ ಎಲ್ಲಾ ಕಾರಣಗಳಿಂದ ಅವಳು ಹೀನ ಸ್ಥಿತಿಗೆ ತಳ್ಳಲ್ಪಟ್ಟಳು. ನಷ್ಟದ ವಸ್ತುವಾದಳು. ಹೆಣ್ಣು ಖರ್ಚಿನ ಮೆಟ್ಟಿಲು ಎಂಬಂತೆ ಅವಳನ್ನು ನೋಡಲಾಯಿತು. ಹೆಣ್ಣು ಹುಟ್ಟಿದರೆ ಹೆಗ್ಗಣದಂತೆ ಮನೆಯನ್ನೆಲ್ಲಾ ಕೊರೆಯಲು ಆರಂಭಿಸುತ್ತಾಳೆ. ಆಕೆಯ ತಂದೆ–ತಾಯಿಗಳು ಹೆಣ್ಣು ಹೆತ್ತು ಕೆಡುತ್ತಾರೆ. ಪುಣ್ಯ ಮಾಡದೆ ಕೆಡುತ್ತಾರೆ.

ಬೀಜೋತ್ಪಾದನೆಯನ್ನು ಸಂತಾನದ ಪ್ರಥಮ ಹೆಜ್ಜೆಯಾಗಿಸಿಕೊಂಡ ಗಂಡು–ಹೆಣ್ಣಿನ ತಾಯ್ತನವನ್ನು ಪರಾಧೀನತೆಯ ಸಂಕೇತವಾಗಿಸಿಕೊಂಡಿದ್ದಾನೆ. ತಾಯ್ತನವನ್ನು ಹಾಡಿ ಹೊಗಳುವ ಸಮಾಜ ಮದುವೆಯಾಗಿ ಹಡೆಯದ ಹೆಣ್ಣನ್ನು ಅತ್ಯಂತ ನಿಕೃಷ್ಟವಾಗಿ ಕಂಡಿದೆ. ಸಂತಾನೋತ್ಪತ್ತಿಗಾಗಿ ಕೇವಲ ಹೆಣ್ಣನ್ನು ದೂಷಿತಳಾಗಿ ಮಾಡಿಕೊಂಡು ತನಗೂ ಅದಕ್ಕೂ ಸಂಬಂಧವೇ ಇಲ್ಲವೆನ್ನುವಂತೆ ನಿರ್ಲಿಪ್ತನಾಗಿದ್ದಾನೆ. ಸಮಾಜದಲ್ಲಿ ಅವಳನ್ನು ಕಠೋರವನ್ನಾಗಿ ನಡೆಸಿಕೊಂಡಿದ್ದಾನೆ.

*'ಬಂಜೆ ಬಾಳು ಎಂಜಲೆಲೆಗೆ ಸಮಾನ*

*ಬಂಜೆ ಹೋದಲ್ಲಿ ಸಂಜೆ*

*ಗೆಡ್ಡೆ ಹೊಲ ಹೀನ, ಗೊಡ್ಡು ಹೆಂಡತಿ ಹೀನ*

*ಸುತನಿಲ್ಲದವಳ ಭಾಗ್ಯ, ಮತವಿಲ್ಲದವನ ಘನತೆ'*

ಮುಂತಾದವುಗಳ ಕಡೆ ಅವಳಿಗೆ ಸಮಾಜದಲ್ಲಿ ಮನ್ನಣೆಯೆ ಇಲ್ಲದಿರುವುದನ್ನು ನಾವು ಗ್ರಹಿಸಬಹುದು. ಆದರೆ ಅದೇ ಸಂತಾನೋತ್ಪತ್ತಿಗೆ ಸಮಾನವಾದ ಪಾತ್ರ ವಹಿಸುವ ಗಂಡಿನ ಬಗ್ಗೆ ಈ ರೀತಿಯಾದಂತಹ ಗಾದೆಗಳು ಕಂಡುಬರುವುದು ತುಂಬಾ ವಿರಳ. ಹೆಣ್ಣು ಮದುವೆಯಾದ ಮೇಲೆ ತಾಯ್ತನದ ಸುಖ ಅನುಭವಿಸಿದಾಗಲೇ ಆಕೆ ಪರಿಪೂರ್ಣಳು. ಇಲ್ಲದಿದ್ದರೆ ಅಪೂರ್ಣಳು ಎಂದು ಅವಳನ್ನು ಗ್ರಹಿಸಲಾಗುತ್ತದೆ. ಇದನ್ನೆಲ್ಲಾ ಗಮನಿಸಿದ ಹೆಣ್ಣು ಬಂಜೆತನ ಸಾಮಾನ್ಯ ಭವಣೆಯೇ ಎಂದು ನಿಟ್ಟುಸಿರು ಬಿಡುತ್ತಾಳೆ.

ಒಟ್ಟಾರೆಯಾಗಿ ಗಾದೆಗಳಲ್ಲಿ ಮಹಿಳೆ ತೀರಾ ಶೋಚನೀಯ ಅವಸ್ಥೆಯನ್ನು ಹೊಂದಿದ್ದಾಳೆ. ಶಿಷ್ಟ ಸಂಸ್ಕೃತಿಯ ಮಹಿಳೆಗಿಂತ ಜನಪದ ಸಂಸ್ಕೃತಿಯ ಮಹಿಳೆಯು ಹೆಚ್ಚಿನ ಉತ್ಪಾದಕ ಶಕ್ತಿಯನ್ನು ಹೊಂದಿದ್ದರೂ ಸ್ಥಾನದಲ್ಲಿ ಯಾವುದೇ ಔನತ್ಯ ಪಡೆದಿಲ್ಲ ಎಂಬುದು ವಿಷಾದನೀಯ. ಸಂಸ್ಕೃತಿಯ ಹೆಸರಿನಲ್ಲಿ ಅವಳ ಮೇಲೆ ಹಲವಾರು ಹೀನಕರವಾದ ಮೌಲ್ಯಗಳನ್ನು ಹೇರುತ್ತಿದ್ದರೂ, ಅದನ್ನು ತಿರಸ್ಕರಿಸುವ, ಸಂತೋಷದಿಂದ ಸ್ವೀಕರಿಸುವ ಮನೋಸ್ಥಿತಿ ಇಲ್ಲದವರು ಹಲವು ಮಹಿಳೆಯರಿದ್ದಾರೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದೂ ಎಂಬಂತೆ ಇಲ್ಲಿ ಹೇಳಿರುವ ವಿಷಯಗಳು ತಮ್ಮ ದಿನನಿತ್ಯದ ಜೀವನದಲ್ಲಿ ಪ್ರಸ್ತುತವೂ ಕೂಡ ಜಾರಿಯಲ್ಲಿರುವುದನ್ನು ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (2006). ಕನ್ನಡ ವಿಷಯ ವಿಶ್ವಕೋಶ ಜಾನಪದ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಗಾಯತ್ರಿ ನಾವಡ. (1999). ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು. ಸಿರಿ ಪ್ರಕಾಶನ, ಹೊಸಪೇಟೆ.
- ಹಿರಣ್ಮಯಿ. (2017). ಕನ್ನಡ ಜನಪ್ರಿಯ ಗಾದೆಗಳು. ಚಿನ್ಮಯ ಪ್ರಕಾಶನ, ಬೆಂಗಳೂರು.
- ಜವರೇಗೌಡ.ದೇ. (1991). ಜಾನಪದ ಅಧ್ಯಯನ. ಚೇತನ ಬುಕ್‌ಹೌಸ್, ಮೈಸೂರು
- ರಾಗೌ. (2008). ಕಿಟೆಲ್ ಕೋಶದ ಗಾದೆಗಳು. ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.
- ಸುಧಾಕರ. (1973). ನಮ್ಮ ಸುತ್ತಿನ ಗಾದೆಗಳು. ತನುಮನ ಪ್ರಕಾಶನ, ಮೈಸೂರು.
- ಸುಮಿತ್ರಬಾಯಿ ಬಿ.ಎನ್, ಗಾಯತ್ರಿ. ಎನ್ (ಸಂ.). (1995). ಸ್ತ್ರೀವಾದಿ ಪ್ರವೇಶಿಕೆ. ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.